ಕುಬೇರಪ್ಪ ಎಂ. ವಿಭೂತಿ, ಹರಿಹರ
ಆಧುನಿಕ ಸ್ತ್ರೀಯರು ತಾಳಿಯನ್ನು ಬ್ರೇಸ್‌ಲೆಟ್ (bracelet) ತರಹ ಕಟ್ಟಿಕೊಳ್ಳಲು ಕಾರಣವೇನು?



ಗಂಡ ಮೊದಲು ಕುತ್ತಿಗೆಗೆ ಬಂದಿದ್ದ, ಈಗ ಕೈಗೆ ಬಂದಿದ್ದಾನೆ ಎಂದು ಸೂಚಿಸಲು.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
ನಗುವನ್ನು ಫಿಕ್ಸೆಡ್ ಡಿಪಾಸಿಟ್‌ನಲ್ಲಿ ಇಟ್ಟರೆ ಬಡ್ಡಿ ಬರುವಂತಿದ್ದರೆ?
ಬಡ್ಡಿ ಕಡಿಮೆ ಇರುತ್ತಿತ್ತು. ನಗುವಿಗೆ ಚಾಲ್ತಿ ಖಾತೆ (ಕರೆಂಟ್ ಅಕೌಂಟ್)ಯಲ್ಲೇ ಹೆಚ್ಚು ಇಂಟರೆಸ್ಟ್ ಸಿಗುವುದು.

ಅನಂತಪದ್ಮನಾಭ ಎಚ್.ಎಂ. ಮೈಸೂರು
ಹೆಂಡತಿ ರೇಡಿಯೊ ಆದರೆ ಗಂಡ...?
ಷಾರ್ಟ್ ವೇವ್.

ಎಚ್.ಆರ್. ದೇಸಾಯಿ, ರಾಯಚೂರು
ಸಾವಿಗೆ ಭವ್ಯ ಸ್ವಾಗತ ಏಕಿಲ್ಲ?




ಟ್ಯೂಬುಮಾಲೆ ತೊಟ್ಟು, ಮೆಷಿನ್‌ಗಳ ಮೇಳದಲ್ಲಿ, ಬಿಲ್ ಮೇಲೆ ಮಲಗಿರುವರ ಸಾವಿಗೆ ಆಸ್ಪತ್ರೆಗಳಿಂದ ಭವ್ಯ ಸ್ವಾಗತವಂತೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಬೀದಿನಾಯಿಗೂ, ಸಾಕುನಾಯಿಗೂ ಏನು ವ್ಯತ್ಯಾಸ?
ಬೀದಿನಾಯಿ ಪಕ್ಷೇತರ ಅಭ್ಯರ್ಥಿ ಇದ್ದಂತೆ. ಇಂದು ಒಬ್ಬರಿಗೆ, ನಾಳೆ ಮತ್ತೊಬ್ಬರಿಗೆ ಬಾಲ ಅಲ್ಲಾಡಿಸುವ ಸ್ವಾತಂತ್ರ್ಯ ಇರುತ್ತದೆ.

ರಮೇಶ್, ಹನುಮನಾಳು
ತಾಳಿ ಕಟ್ಟಿಸಿಕೊಂಡ ವಧುವಿಗೆ ತಾಳಿ ಕಟ್ಟಿದ ವರ ತಾಳಿ ಕಟ್ಟಿಸಿಕೊಂಡಿದ್ದಕ್ಕೆ ಥ್ಯಾಂಕ್ಸ್ ಹೇಳುವುದೇಕೆ?
ಅಟ್ ಲೀಸ್ಟ್ ಅಷ್ಟು ಹೊತ್ತಾದರೂ ತನ್ನ ಮುಂದೆ ತಲೆಬಾಗಿಸಿ ಕುಳಿತಿದ್ದಕ್ಕೆ.

ಗುರು, ಕೋಟೇಶ್ವರ
ತೀರ್ಥ, ತೀರ್ಥದಾಸ, ತೀರ್ಥಾನಂದ; ಈ ಮೂರರ ವ್ಯತ್ಯಾಸವೇನು ರಾಮ್?
ನಿಮ್ಮ ಮನದಲ್ಲಿ ಜಿನರಿದ್ದಾರೋ ಜಿನ್ ಇದೆಯೋ ಎಂಬುದರ ಮೇಲೆ ಅರ್ಥ ವ್ಯತ್ಯಾಸವಾಗುತ್ತದೆ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಇಂದಿನ ದಿನಗಳಲ್ಲಿ ಬೆವರು ಬರುವಂತೆ ದುಡಿದರೂ ಸಂಸಾರ ಸಾಗುವುದಿಲ್ಲವಲ್ಲ ಸಾರ್?
ಬೆವರು ಬರುವಂತೆ ಜಿಮ್‌ನಲ್ಲೂ ದುಡಿಯುತ್ತಾರೆ. ಸಂಬಳ ಬರುವಂತೆ ದುಡಿಯಬೇಕು ಸಾರ್.

ಹರಿತಸ, ಬೆಂಗಳೂರು
ಮದುವೆಯಾದ ಮಗನ ಪ್ರೀತಿ ಪತ್ನಿಯ ಕಡೆಗೆ ಹೆಚ್ಚೋ, ತಾಯಿಯ ಕಡೆಗೆ ಹೆಚ್ಚೋ?
ಡೈನಿಂಗ್ ಹಾಲ್‌ನಲ್ಲಿ ತಾಯಿಯ ಕಡೆ, ಕೊಠಡಿಯಲ್ಲಿ ಪತ್ನಿಯ ಕಡೆ.

ವಿ. ಹೇಮಂತಕುಮಾರ್, ಬೆಂಗಳೂರು
ಪ್ರಾಣಿಗಳನ್ನು ಪ್ರೀತಿಸದೆ ವನಸಂಪತ್ತಿನ ರಕ್ಷಣೆ ಸಾಧ್ಯವೇ ರಾಮ್‌ಜಿ?
ಮಗಳನ್ನು ಪ್ರೀತಿಸದೆ ಮಾವನಸಂಪತ್ತನ್ನು ರಕ್ಷಿಸುವ ಅಳಿಯರಿದ್ದಾರಲ್ಲವೇ... ಹಾಗೇ ಇದೂ ಸಾಧ್ಯ.

ಪಿ. ಜಯವಂತ ಪೈ, ಕುಂದಾಪುರ
ಟಿ.ವಿ.ಯಲ್ಲಿ ಜ್ಯೋತಿಷಿಗಳ ಕಾಟ ದಿನದಿಂದ ದಿನಕ್ಕೆ ಹೆಚ್ಚುತ್ತಿದೆಯಲ್ಲಾ...?
ಜ್ಯೋತಿಷಿಗಳಿಗೆ ಗುರುಬಲ, ವಾಹಿನಿಗಳಿಗೆ ಶುಕ್ರದೆಸೆ, ವೀಕ್ಷಕರಿಗೆ ರಾಹುದೆಸೆ ಇರುವುದೇ ಕಾರಣವಂತೆ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
ಭವ್ಯ ಭಾರತದಲ್ಲಿ ಎಲ್ಲರೂ ಹಗರಣವೀರರೇ ಆಗಿದ್ದಾರಲ್ಲಾ ಹೇ ರಾಂ?
ಹಣವೀರರು, ಗಣವೀರರು, ಹರಣವೀರರನ್ನು ನಿಯಂತ್ರಿಸಲು ಹಗರಣವೀರರಾಗಿದ್ದರೆ ಮಾತ್ರ ಸಾಧ್ಯವಾದ್ದರಿಂದ.

## ಬಹುಮಾನಿತ ಪ್ರಶ್ನೆ

ಸಿ.ಎನ್. ವಿಜಯಲಕ್ಷ್ಮಿ, ಶಿವಮೊಗ್ಗ
'ನನ್ನ ಹಣೆಬರಹದಲ್ಲಿ ಇದ್ದಹಾಗೆ ಆಗುತ್ತೆ' ಎನ್ನುವವರು ಜ್ಯೋತಿಷಿಗಳ ಬಳಿ ಹೋಗುವುದೇಕೆ?
ಜ್ಯೋತಿಷಿಯ ಹಣೆಬರಹದಲ್ಲಿ ಇವರು ಬರುವುದು ಬರೆದಿರುತ್ತಂತೆ.

ಎಂ. ಮೃತ್ಯುಂಜಯ, ಚಿತ್ರದುರ್ಗ
ಹೆಂಡತಿಗೆ ಹೆದರುವ ಗಂಡನಿಗೆ ಏನೆನ್ನುತ್ತಾರೆ?
ಏನೇನೂ ಅನ್ನುವುದಿಲ್ಲ; 'ಪಾಪ! ಮನೆಯಲ್ಲೇ ಸಾಕಷ್ಟು ಅನ್ನಿಸಿಕೊಂಡಿರುತ್ತಾನೆ' ಎಂದುಕೊಂಡು ಸುಮ್ಮನಿದ್ದುಬಿಡುತ್ತಾರೆ.

ಟಿ.ಎಂ. ಮಾನಪ್ಪ, ಶಿವಮೊಗ್ಗ
ಕೂದಲು ಬೆಳ್ಳಗಾದರೆ 'ಹಣ್ಣಾಗುವುದು' ಅನ್ನೋದೇಕೆ?
ಸರಿಯೇ ಇದೆಯಲ್ಲ; ಕಳಚಿ ಬೀಳುವುದಕ್ಕೆ ಮುಂಚಿನ ಹಂತ ಹಣ್ಣೇ.

ರಮಾನಂದ ಶರ್ಮಾ, ಬೆಂಗಳೂರು
ಬೆಂಗಳೂರಿನಲ್ಲಿ ಹೇರ್ ಕಟಿಂಗ್ ಸಲೂನಿಗಿಂತ ಬ್ಯೂಟಿ ಪಾರ್ಲರ್‌ಗಳೇ ಹೆಚ್ಚು ಇವೆಯಂತೆ?



ಒರಿಜಿನಲ್ ಕೇಶವಿರುವ ಗಂಡಸರು, ಒರಿಜಿನಲ್ ಸೌಂದರ್ಯದ ಹೆಂಗಸರು ಕಡಿಮೆ ಇರುವರಂತೆ.

ಭಾರತಿ ಮಾನಗೆ, ಹೊನ್ನಾವರ
ದೀಪ ಉರಿದರೆ ಬೆಳಕು. ಮಾನವ ಉರಿದರೆ?
ಕೋರ್ಟಿಗೆ ಕೇಸು; ವಾಹಿನಿಗೆ ಟಿಆರ್‌ಪಿ; ಮನೆಯಲ್ಲಿ ವೈಕುಂಠದ ಊಟ.

ಶೃತಿ ರಿಗ್ರೆಟ್ ಅಯ್ಯರ್, ಬೆಂಗಳೂರು
ರಾಜಕಾರಣಿಗಳ ಮಕ್ಕಳು ರಾಜಕೀಯಕ್ಕೆ ಬರುವ ಉದ್ದೇಶವೇನು ಸಾರ್?
ಬೇಟೆ ಆಡುವ ಪ್ರಾಣಿಗಳು ತಮ್ಮ ಮರಿಗಳಿಗೆ ಬೇಟೆ ಬಿಟ್ಟು ಬೇರೇನನ್ನೂ ಕಲಿಸಿರುವುದಿಲ್ಲವಲ್ಲ.

■ ರಾಮ್